ಕ್ಕಾಗಿ ಈ ಕೇಂದ್ರವನ್ನು ಪ್ರಾರಂಭಿಸಲಾಗಿದೆಯೋ ಅದು ಪೂರ್ಣವಾಗುವಂತೆ ಸರಕಾರವನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ(ಮಾನ್ಯ ಆರೋಗ್ಯ ಸಚಿವರು).— ಅಧ್ಯಕ್ಷರೇ, ಗುಲ್ಬರ್ಗಾದಲ್ಲಿ ಕುಷ್ಟ ರೋಗಿಗಳ ಪುನರ್ ವಸತಿ ಕೇಂದ್ರದ ಕಟ್ಟಡಕ್ಕಾಗಿ ಹಣವನ್ನು ಒದಗಿಸಿದ್ದರೂ ಕೂಡಾ ಹಲವಾರು ಕಾರಣದಿಂದ ಅದು ವಿಳಂಬವಾಗಿದೆ. ಕಾಂಟ್ರಾಕ್ಟುದಾರರ ಪಾಗೂ ಇತರ ತಾಂತ್ರಿಕ ಕಾರಣದಿಂದಾಗಿ ಇದು ತಡವಾಗಿದೆ. ಆದಷ್ಟು ಜಾಗ್ರತೆ ಕಟ್ಟಡ ವಹಿಸಿದು ಅಲ್ಲಿ ಕೇಂದ್ರ ಆಗ ಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳಿಗೆ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಈ ಕೆಲಸ ಆಗಿ ಕುಷ್ಟ ರೋಗಿಗಳಿಗೆ ಅನುಕೂಲ ಆಗುವ ರೀತಿಯಲ್ಲಿ ಖಂಡಿತ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

೩-೦೦ ಪಿ.ಎಂ.

VI ಮಂಡಕೇರಿಯಲ್ಲಿ ನೂತನ ಬಸ್ ನಿಲ್ದಾಣವನ್ನು ಕಟ್ಟಿಸಲಾಗಿದ್ದರೂ ಸಹ ಅಲ್ಲಿ ಅಸಮರ್ಪಕ ವ್ಯವಸ್ಥೆಯನ್ನುಂಟು ಮಾಡಿರುವ ಬಗ್ಗೆ.

ಶ್ರೀಮತಿ ಸುಮಂಗಲಸಂತ(ವಿರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಮಂಡಕೇರಿಯಲ್ಲಿ ನೂತನ ಬಸ ಸ್ಟ್ಯಾಂಡ್ ಒಂದನ್ನು ಕಟ್ಟಿಸಿದ್ದು ಗಡಿಬಿಡಿಯಿಂದ ಅದನ್ನು ಉಪಯೋಗಕ್ಕೆ ಮುಕ್ತಗೊಳಿಸಲಾಗಿದೆ. ಬಸ್ಸಿನಿಂದ ಯಾರಾದರೂ ಬಂದು ಅಲ್ಲಿ ಇಳಿದುಕೊಂಡರೆ ಅವರಿಗೆ ಎಲ್ಲೋ ಕೆಸರುಗೆದ್ದೆಯಲ್ಲಿ ಬಸ್ಸು ನಿಲ್ಲಿಸಿದ ಅನುಭವ ಬರುತ್ತದೆ. ೧೩ ಲಕ್ಷ ರೂಪಾಯಿ ವಿಚ್ರ್ಚು ಮಾಡಿದ ಈ ಕಟ್ಟಡದಲ್ಲಿ ನೀರು ಸಾಕಷ್ಟು ಪ್ರಮಾಣದಲ್ಲಿ ಆರ್.ಸಿ.ಸಿ.ಯ ಮೇಲೆ ಹೊಡೆಕೆಯನ್ನು ಭೇದಿಸಿಕೊಂಡು ಬಂದಂ ಜನರಿಗೆ ಸುಖಿಸ್ನಾನ ಒದಗಿಸುತ್ತಿದೆ. ವಿದ್ಯುತ್ ಸಂಪರ್ಕ ಅಸಮರ್ಪಕವಾಗಿರುವುದರಿಂದ ಇಲ್ಲಿ ಪಾರ್ಟ್ ಸರ್ಕ್ಯೂಟ್ ಆಗುತ್ತದೆಂದು ದೂರೂ ಸಹ ಇದೆ.

ಮುಂತ್ರಾಲಯ, ಶೌಚಾಲಯಗಳ ಸ್ಥಿತಿ ಅವುಗಳಿಂದ ಹೊರಡುವ ವಾಸನೆ ಜನರಿಗೆ ಅಸಹ್ಯವಾದರೆ ಇಲ್ಲಿನ ಅಧಿಕಾರಿಗಳಿಗೆ ಆಪ್ಯಾಯಮಾನ ಹಾಗಾಗಿ ಅವರಂ ದುರುವಾಸನೆ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನಿಲ್ದಾಣದಲ್ಲಿ ಬಸ್ಸು ಕೆಟ್ಟು ನಿಂತರೆ ತಳ್ಳಲು ಕೆಸರಿನಲ್ಲಿ ಸಾರ್ವಜನಿಕರು ಓಕ್ಕುಳಿ ಆಟ ಆಡಬೇಕಾಗುತ್ತದೆ. ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೆ ಕಿವಿಯಿಲ್ಲ. ಈ ಅವಾಂತರ ಮುಂಗಾರು ಪತ್ರಿಕೆ ವರದಿ ಮಾಡಿದ್ದು ಪತ್ರಿಕೆಯ ನಕಲು ತಮಗೆ ಕಳುಹಿಸಿ ಈ ದುರವಸ್ಥೆಯನ್ನು ಹೋಗಲಾಡಿಸಲು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ(ಮಾನ್ಯ ಸಾರಿಗೆ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೆ, ಮಡಿಕೆರೆ ಬಸ್ ಸ್ಟ್ಯಾಂಡ್‌ನ ಕಟ್ಟಡ ಮತ್ತು ಅದರ ಉದ್ಘಾಟನೆ ಆಗಿ ೪ ತಿಂಗಳಾಗಿದೆ. ಅಲ್ಲಿಯ ವ್ಯವಸ್ಥೆ ಸರಿಯಾಗಿಲ್ಲವೆಂದು ನನಗೆ ಈಗಾಗಲೇ ದೂರುಗಳು ಬಂದಿವೆ. ಮುಂಗಾರು ಪತ್ರಿಕೆಯಲ್ಲಿ ಕಳೆದ ೩ ದಿವಸದ ಹಿಂದೆ ಈ ವಿಚಾರ ಪ್ರಕಟವಾಗಿತ್ತು.. ಈ ವಿಚಾರದಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ರವರಿಗೆ ಒಂದು ಪತ್ರವನ್ನು ಬರೆದು ತಕ್ಷಣ ಇದರ ಬಗ್ಗೆ ಒಂದು ವರದಿಯನ್ನು ಕಳುಹಿಸಿಕೊಡ ಬೇಕೆಂದು ಹೇಳಿದ್ದೇನೆ.

ಅಧ್ಯಕ್ಷರು,—ಇದನ್ನು ಸ್ಪೆಷಲ್ ರಿಸರ್ವ್ಡ್ ಕೇಸ್ ಎಂದು ಮಾಡಿಕೊಳ್ಳಿ.

ಶ್ರೀ ಪಿ. ಜಿ. ಆರ್, ಸಿಂಧ್ಯ.—ಆ ಬಸ್‌ಸ್ಟ್ಯಾಂಡ್‌ನಲ್ಲಿ ಅವ್ಯವಸ್ಥೆ ಇದೆಯೆಂದು ನಾವು ಕೇಳಿದ್ದೇನೆ. ದೂರುಗಳೂ ಬಂದಿವೆ. ಆದ್ದರಿಂದ ಇದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಆದಷ್ಟು ಬೇಗ ಅದನ್ನು ರಿಪೇರಿ ಮಾಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

vii) ಬಂಟವಾಳ ತಾಲ್ಲೂಕ್ ಕೇಂದ್ರ ಆಸ್ಪತ್ರೆ ಅಜೀರ್ಣಾವಸ್ಥೆಯಲ್ಲಿರುವುದರಿಂದ ಅದನ್ನು ಸಂವ್ಯವಸ್ಥೆ ಸ್ಥಿತಿಗೆ ತರುವ ಬಗ್ಗೆ.

ಶ್ರೀ ರಾಮನಾಥ ರೈ. (ಬಂಟ್ವಾಳ).— ಮಾನ್ಯ ಅಧ್ಯಕ್ಷರೇ, ಬಂಟವಾಳ ತಾಲ್ಲೂಕು ಕೇಂದ್ರ ಆಸ್ಪತ್ರೆ ಕೇವಲ ೨೦ ಹಾಸಿಗೆಗಳುಳ್ಳ ಆಸ್ಪತ್ರೆಯಾಗಿದ್ದು ಅಜೀರ್ಣಾವಸ್ಥೆಯಲ್ಲಿದೆ. ಸದರೀ ಆಸ್ಪತ್ರೆ